ದಿನಾಂಕ 03-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಅನುಮತಿಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆ: ಸಸಅ ರವರಿಂದ**

ಸಾಕ್ಷಿಯು ನಿಪಿ-3 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3 ಡಿ ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ 2 ಮೂಲ ದಾಖಲೆಗಳನ್ನು & 1 ರಶೀದಿಯನ್ನು & ಪ್ರ.ಪತ್ರವನ್ನು ನೋಡಿ ಗುರುತಿಸಿದ್ದು, ಆರೋಪಿ ಪರ ವಕೀಲರು ಸದರಿ ಮೂಲ ದಾಖಲೆಗಳ ಮೇಲೆ ಓ ಸಿ ಎಂದು ಬರೆದಿರುತ್ತಾರೆ, ಆದ್ದರಿಂದ ಸದರಿ ದಾಖಲೆ ಮೂಲ ದಾಖಲೆ ಆಗಿರುವುದಿಲ್ಲ ಎಂದು ತಮ್ಮ ತಕರಾರನ್ನು ಸಲ್ಲಿಸಿದ್ದು, ಸದರಿ ದಿ.23-01-2012 ರ ದಾಖಲೆಯನ್ನು ತಕರಾರಿಗೆ ಒಳಪಟ್ಟು ನಿಪಿ-8 ಎಂದು ಗುರುತಿಸಲಾಯಿತು. ದಿ.22-02-2012 ರ ದಾಖಲೆಯನ್ನು ನಿಪಿ-9 ಎಂದು, 1 ರಶೀದಿಯನ್ನು ನಿಪಿ-10 ಎಂದು, ಕಲಂ. 65 ಬಿ ಪ್ರ.ಪತ್ರವನ್ನು ನಿಪಿ-11 ಎಂದು, ಸಾಕ್ಷಿಯು ಸ್ಯಾನ್ ಡಿಸ್ಕ್ ಪೆನ್ ಡ್ರೈವನ್ನು, ಅವುಗಳಲ್ಲಿರುವ ಆಡಿಯೋ, ವೀಡಿಯೋ, ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ-12 ಎಂದು ಗುರುತಿಸಲಾಯಿತು. ಪೆನ್ ಡ್ರೈವ್‌ನಲ್ಲಿರುವ ಆಡಿಯೋ, ವೀಡಿಯೋ & ಫೋಟೋಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ನನಗೆ ಗಾಯವಾದ ಬಗ್ಗೆ ಚಿಕಿತ್ಸೆ ಪಡೆಯುವ ಭಾವಚಿತ್ರಗಳು ನಿಪಿ-12 ರಲ್ಲಿವೆ, 1 ವೀಡಿಯೋ ಕಛೇರಿಯಲ್ಲಿ ಆಗಿರುತ್ತದೆ, ಹಲ್ಲೆಗೆ ಸಂಬಂಧಿಸಿದ ವೀಡಿಯೋ ಒಂದು, ಆರೋಪಿ ಹಲ್ಲೆ ಮಾಡಿ ಓಡಿ ಹೋಗುವ ವೀಡಿಯೋ ಒಂದು, ಶಾಲೆಗೆ ಹೋಗಿ ನನ್ನ ಹೆಂಡತಿಯ ಹತ್ತಿರ ಆತನ ಈ ಕೇಸನ್ನು ಮರಳಿ ಪಡೆಯುವ ಬಗ್ಗೆ ಇರುವ ಒಂದು ವೀಡಿಯೋ, ಪ್ರವೀಣ್ ಎಂಬ ಸಾಕ್ಷಿದಾರರಿಗೆ ಸಾಕ್ಷಿ ಹೇಳಬೇಡ ಎಂದು ಬೆದರಿಸಿದ ಆಡಿಯೋಗಳು, ಕೊಪ್ಪಳ ಎಂ ಎಲ್ ಎ ರಾಘವೇಂದ್ರ ರವರ ಕಡೆಯಿಂದ ಈ ಕೇಸನ್ನು ರಾಜಿ ಮಾಡಿಕೋ ಎಂದು ನನಗೆ ಫೋನ್ ಮಾಡಿಸಿದ ಆಡಿಯೋ, ಕಂಪ್ಲಿ ಎಂ ಎಲ್ ಎ ರವರ ಕಡೆಯಿಂದ ಈ ಕೇಸನ್ನು ರಾಜಿ ಮಾಡಿಕೋ ಎಂದು ನನಗೆ ಫೋನ್ ಮಾಡಿಸಿದ ಆಡಿಯೋ, ಆದರೆ ಅದರಲ್ಲಿ ಆರೋಪಿಯ ಧ್ವನಿ ಇರುವುದಿಲ್ಲ, ಅಶೋಕ್ ಉಮಲೂಟಿ ರವರಿಂದ ನನಗೆ ಈ ಕೇಸನ್ನು ರಾಜಿ ಮಾಡಿಕೋ ಎಂದು ನನಗೆ ಫೋನ್ ಮಾಡಿಸಿದ ಆಡಿಯೋ, ಒಂದು ಆಡಿಯೋದಲ್ಲಿ ಆರೋಪಿಯು ಆಗಿನ ಹೊಸಪೇಟೆ ಸಿಪಿಐ ಈರೇಗೌಡ ರವರ ಬಳಿ ಹೋಗಿ, ನಮ್ಮ ಮಗ ಸಂದೇಶನನ್ನು ಕರೆಸಿಕೊಂಡು, ನಾನು ಮಾಡಿರುವುದು ತಪ್ಪಾಗಿರುತ್ತದೆ ದಯವಿಟ್ಟು ನಿಮ್ಮ ತಂದೆಯವರಿಗೆ ಹೇಳಿ ಕೇಸನ್ನು ವಾಪಾಸ್ ತೆಗೆದುಕೊಳ್ಳಲು ಹೇಳಿರಿ ಎಂದು ಮನವಿ ಮಾಡಿರುತ್ತಾರೆ,

ನೀವು ರಾಜಿ ಆಗುವುದಾಗಿ ನಿಮ್ಮ ತಂದೆ & ಆರೋಪಿಯನ್ನು ಕೂರಿಸಿ ರಾಜಿ ಮಾಡಿಸಿ ಎಂದು ಸಿಪಿಐ ರವರೂ ಸಹ ಮಾರ್ಗದರ್ಶನ ಮಾಡಿಕೊಳ್ಳಿರಿ ಎಂದು ಹೇಳಿರುವ ಆಡಿಯೋ ಸಹ ನಿಪಿ-12 ರಲ್ಲಿವೆ.

ಆಡಿಯೋಗಳನ್ನು & ಒಂದು ವೀಡಿಯೋವನ್ನು ನಾವು ಮಾಡಿದ್ದೇವೆ, ಆಡಿಯೋಗಳು ನನ್ನ ಫೋನಿನಲ್ಲಿ ರೆಕಾರ್ಡ್ ಆಗಿರುತ್ತವೆ. ವೀಡಿಯೋಗಳನ್ನು ನನ್ನ ಮೇಲೆ ಹಲ್ಲೆ ಮಾಡುತ್ತಿದ್ದಾಗ ನಾನು ಅಲ್ಲಿದ್ದವರಿಗೆ ವೀಡಿಯೋ ಮಾಡಿ ಎಂದು ಹೇಳಿದ್ದೆ, ಅಲ್ಲಿರುವವರು ವೀಡಿಯೋ ಮಾಡಿದ್ದರು, ಆದರೆ ಆ ವೀಡಿಯೋ ಮಾಡಿರುವವರು ಯಾರು ಎಂದು ನನಗೆ ಗೊತ್ತಿಲ್ಲ.

ನಿಪಿ-11 ನ್ನು ಪ್ರಹ್ಲಾದ್ ರವರು ಕೊಟ್ಟಿರುತ್ತಾರೆ.

**ಮುಂದುವರೆದ ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-**

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**